# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್** ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

**ಭಾಗ ೨೨**

## ಡೆಟ್ರಾಯ್ಟ್‌ನಲ್ಲಿ ಸ್ವಾಮಿ ವಿವೇಕಾನಂದರು

**ಸ್ವಾ**ಮಿ ವಿವೇಕಾನಂದರು ೧೮೯೪ರ ಫೆಬ್ರವರಿ ೧೧ರಂದು ಡೆಟ್ರಾಯ್ಟ್ ನಗರವನ್ನು ತಲುಪಿದರು. ಶ್ರೀಮತಿ ಬ್ಯಾಗ್ಲಿ ಎಂಬ ಗೌರವಾನ್ವಿತ ಮಹಿಳೆಯ ಬಂಗಲೆಯಲ್ಲಿ ಅವರು ಉಳಿದುಕೊಂಡಿದ್ದರು. ವಿಶೇಷವೆಂದರೆ, ಸ್ವಾಮೀಜಿ ಈ ನಗರಕ್ಕೆ ಬರುವ ಮುನ್ನವೇ ಅವರ ಆಗಮನದ ಸುದ್ದಿಯು ನಗರದ ಜನತೆಯಲ್ಲಿ ಉತ್ಸಾಹವನ್ನು ಕೆರಳಿಸಿತ್ತು. ಇದಕ್ಕೆ ಕಾರಣ ಶ್ರೀಮತಿ ಬ್ಯಾಗ್ಲಿ ಸೆಪ್ಟೆಂಬರ್ ೧೧, ೧೮೯೩ರಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದಳು. ಅಲ್ಲಿ ಸ್ವಾಮೀಜಿಯವರ ಭಾಷಣವನ್ನು ಕೇಳಿ ಬಹಳವಾಗಿ ಮೆಚ್ಚಿಕೊಂಡಿದ್ದಳು. ಆಕೆ ಸ್ವಾಮೀಜಿಯವರನ್ನು ಡೆಟ್ರಾಯ್ಟ್ ನಗರಕ್ಕೆ ಪರಿಚಯಿಸಿದಳು. ಹೀಗಾಗಿ ಅಲ್ಲಿನ ಪ್ರತಿಷ್ಠಿತ ಜನತೆ ಸ್ವಾಮೀಜಿಯವರ ಆಗಮನವನ್ನೇ ಎದುರು ನೋಡುತ್ತಿದ್ದರು. ಈ ಉತ್ಸಾಹದಲ್ಲಿ ಡೆಟ್ರಾಯ್ಟ್ ನಗರದ ವೃತ್ತಪತ್ರಿಕೆಗಳೂ ಸೇರಿಕೊಂಡವು, ಸ್ವಾಮೀಜಿಯವರ ಆಗಮನದ ದಿನದಂದೇ 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯು ಅವರ ಬಗ್ಗೆ ವಿಸ್ತಾರವಾದ ವರದಿಯೊಂದನ್ನು ಪ್ರಕಟಿಸಿತು. ಅವರನ್ನು 'ಪ್ರತಿಷ್ಠಿತ ಬ್ರಾಹ್ಮಣ' ಎಂದು ಪರಿಚಯಿಸಿತು. 'ಅವರೊಬ್ಬ ಆಕರ್ಷಕ ಮತ್ತು ಉದ್ದಾಮ ವಾಗ್ಮಿ' ಎಂದು ಹೊಗಳಿತು.

ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರಕ್ಕೆ ಆಗಮಿಸಿದ ಮಾರನೆಯ ದಿನವೇ ಫ್ರೀಪ್ರೆಸ್ ಜರ್ನಲ್ ಪತ್ರಿಕೆಯ ವರದಿಗಾರನೊಬ್ಬನು ಸ್ವಾಮೀಜಿಯವರ ಜೊತೆಗೆ ಸಂಭಾಷಣೆಯನ್ನು ನಡೆಸಿದನು. ಈ ಸಂದರ್ಶನದಲ್ಲಿ ಪಾಶ್ಚಾತ್ಯರ ಭೌತಿಕ ಶಕ್ತಿಯ ಜೊತೆಗೆ ಪೂರ್ವದೇಶಗಳ ಆಧ್ಯಾತ್ಮಿಕ ಶಕ್ತಿಯನ್ನು ಮಿಲನಗೊಳಿಸುವ ಸಮಸ್ಯೆಯನ್ನು ಸ್ವಾಮೀಜಿ ಪ್ರಮುಖವಾಗಿ ಚರ್ಚೆ ಮಾಡಿದರು. ಈ ಬಗೆಯ ಮಿಲನದಿಂದ ನೂತನ ಬಗೆಯ ಮಾನವನ ಉದಯವಾಗಬಲ್ಲುದು ಎಂದು ಅವರು ಪ್ರತಿಪಾದಿಸಿದರು. ಅಂಥ ಆದರ್ಶ ಮಾನವನು ಹುಲಿಯೊಂದರ ಅಪ್ರತಿಮ ಬಲವನ್ನು ಕುರಿಯೊಂದರ ಒಳ್ಳೆಯತನದೊಂದಿಗೆ ಮೇಳವಿಸಿಕೊಂಡಿರುತ್ತಾನೆ. ಈ ಬಗೆಯ ಬೆಸುಗೆಯು ಪೂರ್ವ ಮತ್ತು ಪಾಶ್ಚಾತ್ಯ ಆದರ್ಶಗಳ ಸಂಯೋಗವನ್ನು ಪ್ರತಿನಿಧಿಸುತ್ತದೆ. ಇದು ಸ್ವಾಮೀಜಿಯವರ ಭವಿಷ್ಯ ಚಿಂತನೆಗಳಲ್ಲಿ ಪ್ರಮುಖ ಪಾತ್ರವನ್ನು ಪಡೆದುಕೊಂಡಿತು. ಈ ಸಂವಾದವನ್ನು ಫ್ರೀ ಪ್ರೆಸ್ ಜರ್ನಲ್ ಪತ್ರಿಕೆಯು ಫೆಬ್ರವರಿ ೧೪, ೧೮೯೪ರಂದು ಪ್ರಕಟಿಸಿತು. ಆ ವರದಿಯ ಶೀರ್ಷಿಕೆಗಳು ಹೀಗಿವೆ:

'ಒಬ್ಬ ಪ್ರತಿಷ್ಠಿತ ಹಿಂದೂ ಸಂನ್ಯಾಸಿಯ ಡೆಟ್ರಾಯ್ಟ್ ನಗರದ ಆಗಮನ' ; 'ಮತ ಮತ್ತು ಧರ್ಮಗಳ ವ್ಯತ್ಯಾಸಗಳ ವಿವರಣೆ', 'ಅತಿಥಿಯೊಂದಿಗೆ ಆಸಕ್ತಿದಾಯಕ ಸಂಭಾಷಣೆ.'

'ಡೆಟ್ರಾಯ್ಟ್ ಈವ್‌ನಿಂಗ್ ನ್ಯೂಸ್' ಪತ್ರಿಕೆಯು ಕೂಡ ತನ್ನ ಫೆಬ್ರವರಿ ೧೪ರ ಸಂಚಿಕೆಯಲ್ಲಿ ಮೇಲಿನ ಸಂದರ್ಶನದ ಕೆಲವು ಭಾಗಗಳನ್ನು ಪ್ರಕಟಿಸಿತು.

ಸ್ವಾಮೀಜಿ ಫೆಬ್ರವರಿ ೧೨ ನೆಯ ತಾರೀಖಿನಿಂದ ೨೩ನೆಯ ತಾರೀಖಿನವರೆಗೆ ಡೆಟ್ರಾಯ್ಟ್ ನಗರದಲ್ಲಿ ನೆಲೆಸಿದ್ದರು. ಮತ್ತೆ ಅವರು ಮಾರ್ಚ್ ೯ರಿಂದ ೩೦ರವರೆಗೆ ಅವರು ಡೆಟ್ರಾಯ್ಟ್‌ಗೆ ಭೇಟಿಕೊಟ್ಟಿದ್ದರು. ಈ ಎರಡೂ ಭೇಟಿಗಳಲ್ಲಿ ಒಟ್ಟಾರೆ ಸ್ವಾಮೀಜಿ ಎಂಟು ಸಾರ್ವಜನಿಕ ಭಾಷಣಗಳನ್ನು ಮಾಡಿದರು. ಇದಲ್ಲದೆ ಹಲವಾರು ಸ್ಥಳಗಳಲ್ಲಿ ಖಾಸಗಿ ಕಾರ್ಯಕ್ರಮಗಳನ್ನು ಕೂಡ ನಡೆಸಿಕೊಟ್ಟರು. ಈ ಎಲ್ಲ ಕಾರ್ಯಕ್ರಮಗಳ ಬಗ್ಗೆ ಡೆಟ್ರಾಯ್ಟ್ ನಗರದ ಪತ್ರಿಕೆಗಳು ಪ್ರಕಟಿಸುವ ವರದಿಗಳು ಪುಟಗಟ್ಟಲೆಯಾಗುತ್ತವೆ. ಹಾಗೂ ಅವುಗಳು ವಿಚಾರ ಮಾಡಿರುವ ಸಂಗತಿಗಳು ಕೂಡ ಬಹಳ ಸಂಕೀರ್ಣವಾಗಿವೆ. ಭಗಿನಿ ಕ್ರಿಸ್ಟೀನ್ ಸ್ವಾಮೀಜಿಯವರು ಡೆಟ್ರಾಯ್ಟ್ ನಗರದಲ್ಲಿ ಮಾಡಿದ ಪ್ರತಿಯೊಂದು ಸಾರ್ವಜನಿಕ ಭಾಷಣವನ್ನೂ ಕೂಡ ಆಲಿಸಿದಳು. ಆಕೆ ಹೀಗೆ ಬರೆಯುತ್ತಾಳೆ: ''ಈ ಅದ್ಭುತ ವ್ಯಕ್ತಿಯಿಂದ (ಸ್ವಾಮಿ ವಿವೇಕಾನಂದರು) ಹೊರಹೊಮ್ಮುತ್ತಿದ್ದ ಅಗಾಧಶಕ್ತಿಯು ಎಷ್ಟು ಮಹತ್ತಾಗಿತ್ತು ಎಂದರೆ ಅದರ ಮುಂದೆ ಎಲ್ಲರೂ ಕುಬ್ಜರಾಗಿ ಹೋಗಿದ್ದರು. ಇದೊಂದು ಸೂರೆಗೊಳ್ಳುವ ಅನುಭವವಾಗಿತ್ತು.''

ಇದೇ ಸಂದರ್ಭದಲ್ಲಿ ಅಮೆರಿಕೆಯ ಪ್ರಸಿದ್ಧ ಕವಯಿತ್ರಿಯಾಗಿದ್ದ ಶ್ರೀಮತಿ ಚಾರ್ಲ್ಸ್ ಎರ್‌ಸ್ಕೈನ್ ಸ್ಕಾಟ್ ವುಡ್ ಎಂಬಾಕೆಯು ಹೇಳಿದ ಪ್ರಸಂಗ ಉಲ್ಲೇಖಾರ್ಹವಾದುದು. ಆಕೆಯು ಸಾರಾ ಬಾರ್ಡ್‌ವುಡ್ ಎಂಬ ಹೆಸರಿನಿಂದ ಪ್ರಖ್ಯಾತಳಾಗಿದ್ದಾಳೆ. ಕುಮಾರಿ ಮಾರ್ಗರೆಟ್ ಕುಕ್ ಎನ್ನುವ ಮಹಿಳೆಯು ಆಕೆಗೆ ಹೇಳಿದ ಪ್ರಸಂಗ ಹೀಗಿದೆ: ಕುಮಾರಿ ಕುಕ್ ಸ್ವಾಮೀಜಿ ಡೆಟ್ರಾಯ್ಟ್ ನಗರಕ್ಕೆ ಭೇಟಿಕೊಟ್ಟಾಗ ಅಲ್ಲಿನ ಪ್ರೌಢಶಾಲೆಯೊಂದರಲ್ಲಿ ಜರ್ಮನ್ ಭಾಷೆಯ ಶಿಕ್ಷಕಿಯಾಗಿದ್ದಳು. ಆಕೆ ಅಲ್ಲಿನ ಯೂನಿಟೇರಿಯನ್ ಚರ್ಚಿನಲ್ಲಿ ನಡೆದ ಸ್ವಾಮೀಜಿಯವರ ಕೆಲವು ಭಾಷಣಗಳಿಗೆ ಹಾಜರಾಗಿದ್ದಳು. ಆಕೆಯದು ಗಂಭೀರವಾದ ಜರ್ಮನ್ ವ್ಯಕ್ತಿತ್ವ; ಆಕೆ ಭಾವನಾತ್ಮಕ ಜೀವಿಯಂತೂ ಖಂಡಿತ ಅಲ್ಲ. ಆದರೂ ಕೂಡ, ಆಕೆ ಸ್ವಾಮೀಜಿಯವರ ಆಧ್ಯಾತ್ಮಿಕ ಶಕ್ತಿಯ ಅಪಾರ ಪ್ರಭಾವಕ್ಕೆ ಒಳಗಾದಳು. ಆಕೆಯ ಮನಸ್ಸಿನಲ್ಲಿ ಸ್ವಾಮೀಜಿಯವರ ಚಿಂತನೆಗಳು ಗಾಢವಾದ ಮುದ್ರೆಯನ್ನು ಬೀರಿದವು. ಹೀಗಾಗಿ ತನ್ನ ಜೀವನದಲ್ಲಿ ಮೊದಲ ಬಾರಿಗೆ ಆಕೆಯು ಭಾಷಣಕಾರರಿಗೆ ಧನ್ಯವಾದಗಳನ್ನು ಸಮರ್ಪಿಸಬೇಕು ಎನ್ನುವ ಮನೋಭಾವವನ್ನು ಹೊಂದಿದಳು. ಹೀಗಾಗಿ ಒಂದು ಭಾಷಣದ ಅಂತ್ಯದಲ್ಲಿ

ಆಕೆ ಸ್ವಾಮೀಜಿಯವರಿಗೆ ಹಸ್ತಲಾಘವ ಮಾಡಿದಳು. ಸ್ವಾಮೀಜಿಯವರ ಪುಣ್ಯಸ್ಪರ್ಶದಿಂದ ಆಕೆಯ ಕೈಗಳಲ್ಲಿ ಒಂದು ರೀತಿಯ ಅಪೂರ್ವ ಸಂವೇದನೆ ಉಂಟಾಯಿತು. ಆಕೆ ಒಡನೆಯೇ ಭಾವಪೂರಿತಳಾದಳು; ಮಾತನಾಡಲೂ ಅಶಕ್ಯಳಾದಳು. ಸ್ವಾಮೀಜಿ ಆಕೆಯ ಕೈಯನ್ನು ಕೆಲವು ಕ್ಷಣಗಳ ಕಾಲ ಹಿಡಿದುಕೊಂಡೇ ಇದ್ದರು ಹಾಗೂ ಆಕೆಯನ್ನು ದಿಟ್ಟಿಸಿ ನೋಡಿದರು. ಆಕೆ ಹಲವಾರು ವರ್ಷಗಳ ನಂತರ ಹೇಳಿದಳು: ''ನಾನೆಂದೂ ಸ್ವಾಮೀಜಿಯವರ ಆ ಅನ್ವೇಷಕ ದೃಷ್ಟಿಯನ್ನು ಮರೆಯಲಾರೆನು. ಅವರ ಮಹಾನತೆ ಮತ್ತು ಪವಿತ್ರತೆಗಳನ್ನು ನಾನು ಎಷ್ಟು ಗಾಢವಾಗಿ ಭಾವಿಸಿದೆನೆಂದರೆ, ಮೂರು ದಿನಗಳ ಕಾಲ ಅವರು ಸ್ಪರ್ಶಿಸಿದ ನನ್ನ ಕೈಗಳನ್ನು ತೊಳೆದುಕೊಳ್ಳಲು ಕೂಡ ನಾನು ಹಿಂಜರಿಯುತ್ತಿದ್ದೆನು.'' ಇಂಥ ಅದ್ಭುತ ಶಕ್ತಿಸಂಪನ್ನರಾಗಿದ್ದರು ಸ್ವಾಮೀಜಿ. ಹೀಗಾಗಿ ಸ್ವಾಮೀಜಿಯವರು ಡೆಟ್ರಾಯ್ಟ್ ನಗರದ ಜನತೆಯ ಮೇಲೆ ಮಾಡಿದ ಪ್ರಭಾವದಿಂದ ಅಲ್ಲಿನ ಜನತೆ ಹುಚ್ಚೆದ್ದಿದ್ದರು ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ.

ಶ್ರೀಮತಿ ಚಾರ್ಲ್ಸ್ ಎರ್‌ಸ್ಕೈನ್ ಸ್ಕಾಟ್ ವುಡ್ ಅವರ ಕುಟುಂಬವು ಡೆಟ್ರಾಯ್ಟ್ ನಗರದಲ್ಲಿ ನೆಲೆಸಿತ್ತು. ಆಗ ಆಕೆ ಚಿಕ್ಕ ಹುಡುಗಿ. ಅವರ ತಂದೆ ಹೇಳುತ್ತಿದ್ದರಂತೆ, ವಾರಗಟ್ಟಲೆ ಸ್ವಾಮಿ ವಿವೇಕಾನಂದರ ಬಗ್ಗೆ ವರದಿಗಳನ್ನು ಪ್ರಕಟಮಾಡಿರದ ಡೆಟ್ರಾಯ್ಟ್ ನಗರದ ಒಂದು ಪತ್ರಿಕೆಯೂ ಇರಲಿಲ್ಲಂತೆ. ಆದರೂ ಅವರ ತಂದೆಗೆ ಸ್ವಾಮೀಜಿ ಅಂದರೆ ಅಷ್ಟಕ್ಕಷ್ಟೆ. ಏಕೆಂದರೆ ಅವರು ಕ್ರೈಸ್ತ ಧರ್ಮದ ಬ್ಯಾಪ್ಟಿಸ್ಟ್ ಪಂಗಡಕ್ಕೆ ಸೇರಿದವರು; ಕಟ್ಟಾ ಸಂಪ್ರದಾಯಸ್ಥರು. ಒಬ್ಬ ನಾಸ್ತಿಕ (ಕ್ರೈಸ್ತರ ಪಾಲಿಗೆ) ಸಂನ್ಯಾಸಿಗೆ ಇಷ್ಟೊಂದು ಗೌರವವನ್ನು ಇಡೀ ನಗರ ಕೊಡುತ್ತಿರುವುದು ಅವರಿಗೆ ಎಳ್ಳಷ್ಟೂ ಇಷ್ಟವಾಗಲಿಲ್ಲ. ಅದಕ್ಕೆಂದೇ ಒಂದು ದಿನ ತಮ್ಮ ಮನೆಯ ಬೆಳಗಿನ ತಿಂಡಿಗೆ ಸ್ವಾಮಿ ವಿವೇಕಾನಂದರಂತೆ ತಲೆಗೆ ಪಗಡಿಯನ್ನು ಸುತ್ತಿಕೊಂಡು ಬಂದರಂತೆ. ಸ್ವಾಮೀಜಿಯವರನ್ನು ಅಣಕಿಸುವ ರೀತಿಯಲ್ಲಿ ಸಂಸ್ಕೃತ ಭಾಷೆಯ ಶ್ಲೋಕ ಪರಾಯಣದಂತೆ ಏನನ್ನೋ ಬಡಬಡಿಸುತ್ತಿದ್ದರಂತೆ. ಆದರೆ ಅವರ ಈ ಬಗೆಯ ಪ್ರತಿಭಟನೆ ಯಶಸ್ವಿಯಾಗಲಿಲ್ಲ. ಅವರ ಮಗಳು, ಚಾರ್ಲ್ಸ್ ಎರ್‌ಸ್ಕೈನ್ ಸ್ಕಾಟ್ ವುಡ್ ಮುಂದೆ ವೇದಾಂತ ಕೇಂದ್ರದ ಸದಸ್ಯರಾದರು.

ಈ ಸಮಯದಲ್ಲಿ ಸ್ವಾಮೀಜಿಯವರ ಬಗ್ಗೆ ಪತ್ರಿಕೆಗಳು ಬರೆದ ವರದಿಗಳು, ಸಂಪಾದಕೀಯಗಳು, ಸ್ವಾಮೀಜಿಯವರ ಪ್ರಭಾವದ ಬಗ್ಗೆ ಪತ್ರಿಕೆಯಲ್ಲಿ ಬಂದ ಪತ್ರಗಳು – ಇವೆಲ್ಲವನ್ನೂ ಇಲ್ಲಿ ಉಲ್ಲೇಖಿಸಲು ಸಾಧ್ಯವಿಲ್ಲ. ಆದರೆ ಒಂದು ವಿಶಿಷ್ಟ ಐತಿಹಾಸಿಕ ಸಂಗತಿಯನ್ನು ಇಲ್ಲಿ ಹೇಳಲೇಬೇಕು. ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರದಲ್ಲಿ ಮಾಡಿದ ಪ್ರವಚನಗಳಲ್ಲಿ ನಾಲ್ಕು ಭಾಷಣಗಳ ಪತ್ರಿಕಾವರದಿಗಳನ್ನು ಮದ್ರಾಸಿನಿಂದ ಪ್ರಕಟವಾಗುವ ರಾಮಕೃಷ್ಣ ಮಹಾಸಂಘದ ಆಂಗ್ಲ ಪತ್ರಿಕೆ 'ವೇದಾಂತ ಕೇಸರಿ'ಯು ೧೯೨೧ರ ತನ್ನ ಸಂಚಿಕೆಗಳಲ್ಲಿ ಪ್ರಕಟಮಾಡಿತು. ಈ ವರದಿಗಳನ್ನು ಮುಂದೆ 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'ಯ ಆಂಗ್ಲ ಅವತರಣಿಕೆಯ ಒಂಭತ್ತನೆಯ ಸಂಪುಟದಲ್ಲಿ ಸೇರಿಸಲಾಯಿತು. ಈ ವರದಿಗಳು ವೇದಾಂತ ಕೇಸರಿಯ ಸಂಪಾದಕರ ಕೈಸೇರಿದ್ದು ಹೇಗೆ ಎನ್ನುವುದು ಆಸಕ್ತಿ ಕೆರಳಿಸುವ ವಿಚಾರ. ಸ್ವಾಮಿ ವಿವೇಕಾನಂದರ ಮಹಿಳಾ ಶಿಷ್ಯೆಯಾದ ಮೇರಿ ಸಿ ಫಂಕಿ ೧೯೦೮ರಲ್ಲಿ, ಡೆಟ್ರಾಯ್ಟ್ ಫ್ರೀಪ್ರೆಸ್ ಪ್ರಕಟಿಸಿದ ಈ ನಾಲ್ಕು ಭಾಷಣಗಳ ವರದಿಗಳನ್ನು ಸ್ವಾಮಿ ಬ್ರಹ್ಮಾನಂದರಿಗೆ ಕಳಿಸಿಕೊಟ್ಟರು. ಇದಲ್ಲದೆ ಒಂದು ಪತ್ರವನ್ನು ಕೂಡ ಬರೆದರು. ಅದರ ಒಂದು ಭಾಗ ಹೀಗಿದೆ: ''ಪ್ರೀತಿಯ ಸ್ವಾಮಿ, ಹದಿನೈದು ವರ್ಷಗಳ ಹಿಂದೆ ಪ್ರಕಟವಾದ ಪತ್ರಿಕೆಯ ತುಣುಕುಗಳನ್ನು ಕಳಿಸಿಕೊಡುತ್ತಿದ್ದೇನೆ. ಇವುಗಳಲ್ಲಿ ನಿಮಗೆ ಆಸಕ್ತಿ ಇದೆ ಎಂದು ನಾನು ಭಾವಿಸಿದ್ದೇನೆ. ಇವುಗಳು ನನಗೆ ಬಹಳ ಅಮೂಲ್ಯವಾದುವು. ಇವುಗಳ ಪ್ರತಿಯನ್ನು ಮಾಡಲಾಗದು. ದಯವಿಟ್ಟು ಇವುಗಳನ್ನು ಕಾಲಾಂತರದಲ್ಲಿ ಪುನಃ ವಾಪಸ್ಸು ಕಳಿಸಿಕೊಡಿ. ಈ ಸ್ವಾರ್ಥಕ್ಕೆ ನನ್ನನ್ನು ಕ್ಷಮಿಸಿ. ನನ್ನ ಹತ್ತಿರವಿರುವುದು ಸ್ವಾಮೀಜಿಯವರ ಇದೊಂದು ಸ್ಮರಣಿಕೆ ಮಾತ್ರ. ಆದರೆ ನಿಮಗಾದರೋ, ಮಠವಿದೆ, ಸ್ವಾಮೀಜಿಯವರ ಕೊಠಡಿಯಿದೆ, ಇದಲ್ಲದೆ, ಬೇಲದ ಮರದ ಕೆಳಗೆ ಅವರು ಕುಳಿತಿರುತ್ತಿದ್ದ ಆ ಪುಣ್ಯಸ್ಥಾನ – ಇವೆಲ್ಲ ಇವೆ. ಆದರೆ ಈ ಪತ್ರಿಕಾ ತುಣುಕುಗಳನ್ನು ನೀವು ಎಷ್ಟುಕಾಲ ಬೇಕಾದರೂ ಇಟ್ಟುಕೊಳ್ಳಿ.''

ಇದಾಗಿ ಹದಿಮೂರು ವರ್ಷಗಳ ನಂತರ, ಸ್ವಾಮಿ ಅಶೋಕಾನಂದರು ಮದ್ರಾಸಿನ ರಾಮಕೃಷ್ಣ ಮಠದಲ್ಲಿ ಒಂದು ಮರದ ಬೀರುವಿನಲ್ಲಿ ಇದ್ದ ಹಳೆಯ ಕಾಗದಪತ್ರಗಳನ್ನು ವಿಲೇವಾರಿ ಮಾಡುತ್ತಿದ್ದರು. ಆ ಸಮಯದಲ್ಲಿ ಅವರಿಗೆ ಟೈಪು ಮಾಡಿದ ಪತ್ರಿಕೆಯ ತುಣುಕುಗಳು ಮತ್ತು ಮೇರಿ ಫಂಕಿ ಬರೆದ ಪತ್ರವೂ ಸಿಕ್ಕಿದವು. ಇವು ಅಮೂಲ್ಯವಾದ ನಿಧಿಯೇ ಎಂದು ಕಂಡುಕೊಂಡ ಸ್ವಾಮಿ ಅಶೋಕಾನಂದರು ಇವನ್ನು 'ವೇದಾಂತ ಕೇಸರಿ'ಯ ಸಂಪಾದಕರಿಗೆ ಹಸ್ತಾಂತರ ಮಾಡಿದರು. ತದನಂತರ ಅವುಗಳು 'ವೇದಾಂತ ಕೇಸರಿ' ಪತ್ರಿಕೆಯಲ್ಲಿ ಪ್ರಕಟವಾದುವು. ಈ ರೀತಿಯಲ್ಲಿ ಸ್ವಾಮೀಜಿಯವರ ಉತ್ಕೃಷ್ಟವಾದ ಪ್ರವಚನಗಳು ಬೆಳಕಿಗೆ ಬಂದವು.

ಈ ಡೆಟ್ರಾಯ್ಟ್ ಪ್ರವಚನಗಳ ಬಗ್ಗೆ ಭಗಿನಿ ಕ್ರಿಸ್ಟೀನ್ ಹೀಗೆ ಬರೆಯುತ್ತಾಳೆ: ''ಇಂಥ ಪ್ರವಚನಗಳನ್ನು ಕೇಳಿಸಿಕೊಳ್ಳಲಾಗಲಿ, ಅಥವಾ ಅದನ್ನು ಭಾವಿಸಲಾಗಲಿ ಮತ್ತೆ ಸಾಧ್ಯವಾಗುವುದೇನು? ಆ ಮೂಲಕ ನನ್ನಲ್ಲಿ ಹುದುಗಿರುವ ಮೌಲ್ಯಗಳಲ್ಲಿಯೇ ಭಾರಿ ಪರಿವರ್ತನೆ ಉಂಟಾಯಿತು. ನನ್ನಲ್ಲಿ ಆಧ್ಯಾತ್ಮಿಕ ಬೀಜವನ್ನು ಈ ಪ್ರವಚನಗಳು ಬಿತ್ತಿದವು; ವರ್ಷಾನುಗಟ್ಟಲೆ ಅದು ಆಧ್ಯಾತ್ಮಿಕ ವೃಕ್ಷವಾಗಿ ಬೆಳೆಯಿತು. ಹಾಗೂ ಮತ್ತೂ ಕೆಲವು ವರ್ಷಗಳ ನಂತರ, ಅವು ಫಲವನ್ನು ನೀಡಲು ಆರಂಭಿಸಿವೆ.''

ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್‌ನಲ್ಲಿ ತಮ್ಮ ಮೊದಲ ಭಾಷಣವನ್ನು ಮಾಡಿದ್ದು ಬುಧವಾರ, ೧೮೯೪ರ ಫೆಬ್ರವರಿ ೧೫ರಂದು ಸಂಜೆ, ಯೂನಿಟೇರಿಯನ್ ಚರ್ಚಿನಲ್ಲಿ. ಮೇರಿ ಸಿ ಫಂಕಿ ಈ ಪ್ರವಚನವನ್ನು ಕೇಳಿದ ಅದೃಷ್ಟವಂತರಲ್ಲಿ ಒಬ್ಬರು. ಅವರು ಇದರ ಬಗ್ಗೆ ಹೀಗೆ ಬರೆಯುತ್ತಾರೆ: ''ಬೃಹತ್ತಾದ

ಚರ್ಚಿನ ಸಭಾಂಗಣ ತುಂಬಿ ತುಳುಕುತ್ತಿತ್ತು. ಸ್ವಾಮೀಜಿಯವರು ಸ್ವಾಗತದ ಭಾರೀ ಕರತಾಡನವನ್ನು ಸ್ವೀಕರಿಸಿದರು. ಅವರು ವೇದಿಕೆಯ ಮೇಲೆ ಹತ್ತಿಬರುವುದನ್ನು ನಾನು ನೋಡಿದೆ – ಅವರದು ರಾಜೋಚಿತವಾದ, ಪ್ರಮುಖವಾಗಿ ಕಂಡುಬರುವ, ಶಕ್ತಿಯುತವಾದ ಆಕೃತಿ. ಹಾಗೆಯೇ ನಾನು ಪ್ರಥಮ ಬಾರಿಗೆ, ಅವರ ಬಹಳ ಸುಂದರವಾದ ಧ್ವನಿಯನ್ನು ಕೇಳಿಸಿಕೊಂಡೆನು. ಅದು ನನಗೆ ಸಂಗೀತದ ಹಾಗೆ ಕೇಳಿಸಿತು. ಅದು ಸ್ವರಬದ್ಧವಾಗಿತ್ತು, ಗಾಢವಾದ, ನಿಯಮಿತ ಸ್ಪಂದನದಿಂದ ಕೂಡಿತ್ತು. ಆ ಧ್ವನಿಯಲ್ಲಿ ಒಂದು ರೀತಿಯ ನೀರವತೆಯನ್ನು ನಾನು ಭಾವಿಸಿದೆನು. ಇಡೀ ಸಭೆಯು ಒಬ್ಬನೇ ಒಬ್ಬ ವ್ಯಕ್ತಿಯಂತೆ ಇದನ್ನು ಹೀರಿಕೊಂಡಿತು.''

'ಡೆಟ್ರಾಯ್ಟ್ ಫ್ರೀ ಪ್ರೆಸ್' ಈ ಪ್ರವಚನದ ವರದಿಯನ್ನು ಪ್ರಕಟಿಸಿತು. ಇದನ್ನು 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'ಯ ಆಂಗ್ಲ ಅವತರಣಿಕೆಯ ಎಂಟನೆಯ ಸಂಪುಟದಲ್ಲಿ ಪ್ರಕಟಿಸಲಾಗಿದೆ. ಇದರ ಶೀರ್ಷಿಕೆ 'ಭಾರತ' ಎಂದು. ಆದರೆ ಪತ್ರಿಕೆಯಲ್ಲಿ ಮುದ್ರಿತವಾಗಿದ್ದ ಶೀರ್ಷಿಕೆಯು ಅಲ್ಲಿ ಪ್ರಕಟವಾಗಿಲ್ಲ. ಅದು ಹೀಗಿದೆ.

'ಭಾರತ ಅತ್ಯಂತ ನೈತಿಕ ದೇಶ' ; 'ವಿವೇಕಾನಂದರು ತಮ್ಮ ದೇಶವನ್ನು ಹಾಗೆ ಪರಿಗಣಿಸುತ್ತಾರೆ' ; 'ಪೂರ್ವ ದೇಶದ ಸಂನ್ಯಾಸಿಯಿಂದ ಅದ್ಭುತವಾದ ಭಾಷಣ' ; 'ಇಂದು ಅವರು ಹಿಂದೂ ತತ್ತ್ವಶಾಸ್ತ್ರದ ಬಗ್ಗೆ ಮಾತನಾಡುತ್ತಾರೆ.'

ಈ ಪತ್ರಿಕೆಯ ವರದಿಯ ಒಂದು ಭಾಗ ಹೀಗಿದೆ :

''ಇದೊಂದು ವಿಪರ್ಯಾಸವೇ ಸರಿ. ಪೂರ್ವದೇಶದಿಂದ ಬಂದ ಒಬ್ಬ ಸಂನ್ಯಾಸಿಯೊಬ್ಬರು ಭಾರತದ ಕ್ರೈಸ್ತ ಮಿಷನರಿಯನ್ನು ಕಟುವಾಗಿ ಟೀಕಿಸುತ್ತಾರೆ. ಭಾರತವು ಅತ್ಯಂತ ನೈತಿಕ ದೇಶವೆಂದು ಘೋಷಿಸುತ್ತಾರೆ. ಅಂಥ ಭಾಷಣಕಾರರನ್ನು ಬಿಷಪ್ ನಿಂದೆ ಅವರು ಸಭಿಕರಿಗೆ ಪರಿಚಯಿಸಿದರು. ಅವರು ಇದೇ ವರ್ಷದ ಜೂನ್ ತಿಂಗಳಿನಂದು ಚೀನಾದೇಶಕ್ಕೆ ಮಿಷನರಿ ಕೆಲಸಕ್ಕಾಗಿ ತೆರಳುವವರಿದ್ದಾರೆ. ಅಲ್ಲಿಯೇ ಡಿಸೆಂಬರ್ ತಿಂಗಳಿನವರೆಗೆ ಇರುತ್ತಾರೆ. ಅನಂತರ ಅವರು ಭಾರತ ದೇಶಕ್ಕೂ ಹೋಗಬಹುದು.''

ಇದೇ ವರದಿಯಲ್ಲಿ ಸ್ವಾಮೀಜಿಯವರ ಪ್ರವಚನವನ್ನು ಹೀಗೆ ಸಂಗ್ರಹಿಸಲಾಗಿದೆ:

''ಕ್ರೈಸ್ತನಲ್ಲಿ ಇದ್ದಂತಹ ದೈನ್ಯತೆಯು ಭಾರತೀಯರಲ್ಲಿ ಇದೆ. ಇಂತಹ ದೇಶಕ್ಕೆ ಧರ್ಮವನ್ನು ಬೋಧಿಸುವ ಯಾವ ಪಾದ್ರಿಗಳೂ ಬೇಕಾಗಿಲ್ಲ. ಏಕೆಂದರೆ ಅವರ ಧರ್ಮವು ಎಲ್ಲರೂ ಮೃದುವಾಗಿರುವಂತೆ, ಎಲ್ಲರೊಡನೆಯೂ ಮಧುರವಾಗಿ ವರ್ತಿಸುವಂತೆ, ಎಲ್ಲರಿಗೂ – ಮಾನವರಾಗಲಿ, ಪ್ರಾಣಿಗಳಾಗಲಿ– ದಯೆ ತೋರುವಂತೆ, ವಿಶ್ವಾಸವನ್ನು ತೋರುವಂತೆ ಮಾಡುತ್ತದೆ. ನೈತಿಕವಾಗಿ ಭರತಖಂಡ ಅಮೆರಿಕಕ್ಕಿಂತಲೂ ಮತ್ತು ಇತರ ಎಲ್ಲ ರಾಷ್ಟ್ರಗಳಿಗಿಂತಲೂ ಎಷ್ಟೋ ಎತ್ತರದಲ್ಲಿದೆ. ಪಾದ್ರಿಗಳು ಅಲ್ಲಿಗೆ ಬಂದು, ಅಲ್ಲಿಯ ಪವಿತ್ರ ವಾತಾವರಣದಲ್ಲಿದ್ದು, ಅಲ್ಲಿಯ ಅಸಂಖ್ಯಾತ ಮಹಾತ್ಮರು ಎಂತಹ ಪ್ರಭಾವವನ್ನು ಜನರ ಮೇಲೆ ಬೀರಿದರು ಎಂಬುದನ್ನು ನೋಡುವುದು ಮೇಲು.'' *(ಕೃತಿಶ್ರೇಣಿ, ೭ : ೩೬೮)*

ಸ್ವಾಮೀಜಿ ಡೆಟ್ರಾಯ್ಟ್ ನಗರದಲ್ಲಿ ಸಿಡಿಸಿದ ಹಲವಾರು ಸಿಡಿಮದ್ದುಗಳಲ್ಲಿ ಇದು ಮೊದಲನೆಯದು. ಈ ಪ್ರವಚನವನ್ನು ಈವ್‌ನಿಂಗ್ ನ್ಯೂಸ್, ಟ್ರಿಬ್ಯೂನ್, ಜರ್ನಲ್, ಫ್ರೀ ಪ್ರೆಸ್ ಮುಂತಾದ ಪತ್ರಿಕೆಗಳು ವರದಿ ಮಾಡಿದವು. ಇದರಿಂದ ಭಾರತದಲ್ಲಿ ಕ್ರೈಸ್ತ ಮಿಷನರಿಗಳು ಉತ್ತಮವಾದ ಕಾರ್ಯವನ್ನೇನೂ ಮಾಡುತ್ತಿಲ್ಲ ಎಂದು ಜನರು ಮನಗಂಡರು. ಇದು ಕ್ರೈಸ್ತ ಪಾದ್ರಿಗಳ ಕೆಂಗಣ್ಣಿಗೆ ಕಾರಣವಾಯಿತು.

ಸ್ವಾಮೀಜಿಯವರನ್ನು ಪರಿಚಯಿಸಿದ ಬಿಷಪ್ ನಿಂದೆ ಅವರು ಭಾರತೀಯ ಜನರ ಕಟ್ಟುಪಾಡುಗಳ ಬಗ್ಗೆ ಮಾತ್ರವೇ ಸ್ವಾಮೀಜಿ ಮಾತನಾಡುತ್ತಾರೆ ಎಂದು ಪರಿಗಣಿಸಿದ್ದರು. ಅಂಥ ಜನರಿಗೆ ಕ್ರೈಸ್ತ ಧರ್ಮದ ಬೆಳಕನ್ನು ನೀಡುವ ತಮ್ಮ ಮಿಷನರಿ ಕಾರ್ಯಕ್ಕೆ ಇದು ಸಹಾಯಕವಾಗುತ್ತದೆ ಎಂದು ಎಣಿಸಿದ್ದರು. ಆದರೆ ಈ ಭಾಷಣದಲ್ಲಿ ಸ್ವಾಮೀಜಿ ಕ್ರೈಸ್ತ ಮಿಷನರಿಗಳ ಬಗ್ಗೆ ಆಡಿದ ಮಾತುಗಳು ಅವರಿಗೆ ಭಾರೀ ಆಘಾತವನ್ನು ಉಂಟುಮಾಡಿತು. ಅವರ ಕಣ್ಣೆದುರಿಗೇ, ಅವರು ಕುಳಿತಿದ್ದ ವೇದಿಕೆಯ ಮೇಲೆಯೇ ನಿಂತು ಸ್ವಾಮಿ ವಿವೇಕಾನಂದರು ಹಿಂದೂ ಜನತೆಯ ಧರ್ಮದ ಶ್ರೇಷ್ಠತೆಯನ್ನು ಎತ್ತಿತೋರಿಸಿದರು ಮಾತ್ರವಲ್ಲ, ಭಾರತವು ವಿಶ್ವದಲ್ಲೆಲ್ಲಾ ಅತ್ಯಂತ ನೀತಿವಂತ ದೇಶವೆಂದೂ, ಭಾರತಕ್ಕೆ ಕ್ರೈಸ್ತ ಮಿಷನರಿಗಳ ಆವಶ್ಯಕತೆ ಇಲ್ಲವೆಂದೂ ಘೋಷಿಸಿದರು! ಇದನ್ನು ಕೇಳಿ ಕ್ರೈಸ್ತ ಬಿಷಪ್ ನಿಜಕ್ಕೂ ತಲ್ಲಣಕೊಂಡರು. ತಮ್ಮ ಚರ್ಚಿನಿಂದ ಅವರು ಬಹಳಷ್ಟು ತೊಂದರೆಗಳನ್ನು ಅನುಭವಿಸಬೇಕಾದ ಸಂದರ್ಭ ಒದಗಿತು ಎಂದು ಭಾವಿಸಿದರು. ಹೀಗಾಗಿ ಸ್ವಾಮೀಜಿಯವರ ಪ್ರವಚನಕ್ಕೆ ಸಮಜಾಯಿಷಿಯನ್ನು ಫ್ರೀ ಪ್ರೆಸ್ ಪತ್ರಿಕೆಯ ಸಂಪಾದಕರಿಗೆ ಬರೆದ ತಮ್ಮ ಒಂದು ಪತ್ರದಲ್ಲಿ ಅವರು ತೋಡಿಕೊಂಡರು. ಅದು ಆ ಪತ್ರಿಕೆಯ ಫೆಬ್ರವರಿ ೧೬, ೧೮೯೪ರ ಸಂಚಿಕೆಯಲ್ಲಿ ಪ್ರಕಟವಾಯಿತು. ಅದರಲ್ಲಿ ಬಿಷಪ್ ಅವರು ಸ್ವಾಮೀಜಿಯವರು ಮಿಷನರಿಗಳ ಬಗ್ಗೆ ಹೇಳಿದ ಮಾತುಗಳಿಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಹಾಗೆಯೇ ಭಾರತದಲ್ಲಿ ಮಿಷನರಿ ಕಾರ್ಯಗಳು ಉತ್ತಮವಾಗಿ ನಡೆಯುತ್ತಿವೆ ಎಂದು ಸಮರ್ಥಿಸಿಕೊಂಡರು.

ಹೀಗೆ ಒಂದು ಯುದ್ಧವೇ ಆರಂಭಗೊಂಡಿತು. ಸ್ವಾಮಿ ವಿವೇಕಾನಂದರನ್ನು ಕಟುವಾಗಿ ಟೀಕಿಸುವ ಅನೇಕ ಲೇಖನಗಳು, ಪತ್ರಗಳು ಡೆಟ್ರಾಯ್ಟ್ ನಗರದ ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಇದಲ್ಲದೆ ಪ್ರತಿಷ್ಠಿತ ಗಣ್ಯರ ಮನೆಗಳಲ್ಲಿ, ಚರ್ಚುಗಳ ಪಡಸಾಲೆಗಳಲ್ಲಿ ಮತ್ತು ಕೂಟಗಳಲ್ಲಿ ನಡೆದಿರಬಹುದಾದ ಹಲವಾರು ಚರ್ಚೆಗಳು, ವಾಗ್ವಿವಾದಗಳನ್ನು ನಾವು ಊಹಿಸಿಕೊಳ್ಳಬಹುದು. ಒಟ್ಟಾರೆ ಸಾಂಪ್ರದಾಯಿಕ ಕ್ರೈಸ್ತ ವರ್ಗವು ಬಿಷಪ್ ಅವರ ಈ ಪತ್ರದಿಂದ ಸಂತೋಷಗೊಂಡಿತು. ಆದರೆ ಸ್ವಾಮೀಜಿ ಇನ್ನಷ್ಟು ಘೋರ ಪ್ರತಿರೋಧವನ್ನು ಮುಂಬರುವ ದಿನಗಳಲ್ಲಿ ಎದುರಿಸಬೇಕಾಯಿತು.

*(ಮುಂದುವರಿಯುವುದು)*